ಶ್ರೀ ಜಯಪ್ರಕಾಶ್ ಹೆಗಡೆ: ವ್ಹಾಡಿಕೆಯ ಮಾತುಗಳು ಶಾಲೆಗೆ ಬರಬಾರದು; ಶಾಲೆಯಲ್ಲಿ ಬಳಸುವ ಶಬ್ದಕ್ಕೂ ವಾಡಿಕೆಯ ಶಬ್ದಕ್ಕೂ ಬಹಳ ವ್ಯತ್ಯಾಸವಿದೆ.

ಶ್ರೀ ವಾಟಾಳ್ ನಾಗರಾಜ್: ಶಾಲೆಯನ್ನು ಮಡಿವಂತಿಕೆ ಮಾಡಬಾರದು. ಸಾಹಿತಿ ಬಹಳ ಉತ್ತಮವಾಗಿ ಬರೆದಿರುತ್ತಾರೆ.

ಶ್ರೀ ಜಯಪ್ರಕಾಶ್ ಹೆಗ್ಡೆ: ಸಾಹಿತ್ಯಕ್ಕೆ ತೊಂದರೆಯಿಲ್ಲ, ಪಠ್ಯಪುಸ್ತಕಕ್ಕೆ ಬರಬಾರದು.

ಶ್ರೀ ವಾಟಾಳ್ ನಾಗರಾಜ್: ಅದು ಬರಲಿಲ್ಲವೆಂದರೆ ಗ್ರಾಮ್ಯ ಪದಗಳು ಆ ಜನಕ್ಕೂ ಗೊತ್ತಾಗುವುದಿಲ್ಲ.

ಶ್ರೀ ಎ.ಟಿ.ರಾಮಸ್ವಾಮಿ: ಈಗಾಗಲೇ ಈ ವಿಷಯದ ಮೇಲೆ ವಿಸ್ತೃತವಾಗಿ ಚರ್ಚೆಯಾಗಿದೆ. ನಿಮಯ 69ರ ಮೇರೆಗೆ ಚರ್ಚೆಯಾಗಿದೆ. ಆದರೆ ಮಂತ್ರಿಗಳೂ ಕೂಡ ಮೊನ್ನೆ ಉತ್ತರಿಸುವಾಗ ಈ ಕಾಮಗಾರಿಗಳ ಅನುಷ್ಠಾನದಲ್ಲಿ ಸ್ವಲ್ಪ ಲೋಪದೋಷ ಇರುವುದರಿಂದ ಅದನ್ನು ಸರಿಪಡಿಸಬೇಕಾಗಿರುವುದರಿಂದ ಸ್ವಲ್ಪ ವಿಳಂಬವಾಗುತ್ತಿದೆ ಯೆಂದು ಹೇಳಿದ್ದಾರೆ. ಈಗ ನನ್ನ ಪ್ರಶ್ನೆ 2003–04ರಲ್ಲಿ 118.41 ಲಕ್ಷ ರೂಪಾಯಿ ಗಳನ್ನು ಕೇಂದ್ರ ಸರ್ಕಾರ ಮಂಜೂರಾತಿ ನೀಡಿದೆ. ಆದರೆ ಇವರು ಖರ್ಚು ಮಾಡಿರುವ ಹಣ ಇದುವರೆಗೆ 118.41 ಲಕ್ಷ ರೂ.ಗಳಲ್ಲಿ ಕೇವಲ 38.19 ಲಕ್ಷ ರೂಪಾಯಿಗಳು ಮಾತ್ರ. ಈ ಕಾಮಗಾರಿಯ ವಿಳಂಬವಾಗುವುದನ್ನು ತಪ್ಪಿಸಬೇಕು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 5363
ಸದಸ್ಯರ ಹೆಸರು : ಶ್ರೀ ರಾಮಸ್ವಾಮಿ ಎ.ಟಿ. (ಅರಕಲಗೂಡು)
ಉತ್ತರಿಸಬೇಕಾದ ದಿನಾಂಕ : 13–7–2005
ಉತ್ತರಿಸುವ ಸಚಿವರು : ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

<table>
<tr><th>ಕ್ರ.ಸಂ.</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>1</td><td>ಪ್ರಧಾನ ಮಂತ್ರಿಗಳ ಗ್ರಾಮ ಸಡಕ್ ರಸ್ತೆ ಯೋಜನೆ ಪ್ರಾರಂಭ ವಾದಾಗಿನಿಂದ ವರ್ಷವಾರು ಮಂಜೂರಾದ ಹಣ ಎಷ್ಟು;</td><td>ಪ್ರಧಾನ ಮಂತ್ರಿಗಳ ಗ್ರಾಮ ಸಡಕ್ ರಸ್ತೆ ಯೋಜನೆಯಡಿ ಮಂಜೂರಾದ ಹಣದ ವಿವರಗಳು ಈ ಕೆಳಕಂಡಂತಿದೆ.
(ರೂ. ಕೋಟಿಗಳಲ್ಲಿ)
<table>
<tr><th>2000–01(ಹಂತ–1)</th><th>2001–02 ಮತ್ತು 2002–03(ಹಂತ–2)</th><th>2003–04 (ಹಂತ–3)</th></tr>
<tr><td>103.67</td><td>220.26</td><td>118.41</td></tr>
</table>
</td></tr>
</table>

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
2.	ವರ್ಷವಾರು, ಮಂಜೂರಾದ ಹಣವನ್ನು ಪೂರ್ಣವಾಗಿ ಉಪಯೋಗಿಸಲಾಗಿದೆಯೇ;	ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯ ಹಂತ–1ರ ಹಣವನ್ನು ಪೂರ್ತಿ ಉಪಯೋಗಿಸಲಾಗಿದೆ. ಹಂತ–2ರ ಮಂಜೂರಾದ ಹಣದಲ್ಲಿ ರೂ. 212.56 ಕೋಟಿಗಳನ್ನು ವೆಚ್ಚ ಮಾಡಲಾಗಿದೆ. ಹಂತ –3ರಲ್ಲಿ ಬಿಡುಗಡೆಯಾದ ರೂ. 59.41 ಕೋಟಿ ಅನುದಾನದ ರೂ. 38.19 ಕೋಟಿ ಹಣವನ್ನು ವೆಚ್ಚ ಮಾಡಲಾಗಿದೆ.
3	ಉಪಯೋಗಿಸಲಾಗದಿದ್ದರೆ ಕಾರಣಗಳೇನು; ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?	ಮುಂದಿನ ಕಂತಿನ ಅನುದಾನ ರೂ. 59.00 ಕೋಟಿ ಸದ್ಯದಲ್ಲೇ ಬಿಡುಗಡೆಯಾಗಲಿದೆ ಮತ್ತು ಡಿಸೆಂಬರ್ –2005ರ ಅಂತ್ಯದೊಳಗೆ ಕಾಮಗಾರಿಗಳು ಪೂರ್ಣಗೊಳ್ಳುವ ನಿರೀಕ್ಷೆಯಿದೆ.

ನಂ:ಗ್ರಾ.ಅಪ:184: ಆರ್‌ಆರ್‌ಸಿ:2005

(ಡಾ. ಹೆಚ್.ಸಿ. ಮಹದೇವಪ್ಪ)

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಶ್ರೀ ಎ. ಟಿ. ರಾಮಸ್ವಾಮಿ : 118 ಕೋಟಿಯಲ್ಲಿ ವಿಳಂಬವಾಗಿದೆ. ಇಂತಹ ವಿಳಂಬವನ್ನು ತಪ್ಪಿಸಬೇಕು. ಈ ವಿಳಂಬಕ್ಕೆ ಕಾರಣಕರ್ತರಾಗಿದ್ದಾರಲ್ಲ ಇಂಜಿನಿಯರ್ಸ್ ಮತ್ತು ಗುತ್ತಿಗೆದಾರರು ಅವರ ಮೇಲೆ ನೀವು ಏನು ಕ್ರಮ ಕೈಗೊಳ್ಳುತ್ತಿದ್ದೀರಿ? ಯಾರನ್ನಾದರೂ ಕಪ್ಪುಪಟ್ಟಿಗೆ ಸೇರಿಸಿದ್ದೀರಾ? ಏನಾದರೂ ಕ್ರಮ ಜರುಗಿಸಿದ್ದೀರಾ ಎನ್ನುವುದನ್ನು ತಿಳಿಸಬೇಕು. ಮತ್ತೆ ಈ ಕಾಮಗಾರಿಗಳ ಅಂದಾಜನ್ನು ತಯಾರು ಮಾಡಿ ಕಳುಹಿಸುವುದನ್ನು ವಿಳಂಬ ಮಾಡುತ್ತಿದ್ದಾರೆ ಮಾನ್ಯ ಸಚಿವರೇ, ಏಕೆಂದರೆ ಕೆಲವು ಕಾಮಗಾರಿಗಳು ಬೇರೆ ಇಲಾಖೆಯಲ್ಲಿ ಏನಾಗುತ್ತದೆ ಅಂದರೆ ಟೆಂಡರ್ ಆಗುತ್ತದೆ. ಆ ಎಸ್ಟಿಮೇಟನ್ನು ಮಂಜೂರಾತಿ ಮಾಡಿಸುವುದಕ್ಕೆ ಆ ಗುತ್ತಿಗೆದಾರ ಒಂದು ಇಲಾಖೆಯಿಂದ ಇನ್ನೊಂದು ಕಚೇರಿಗೆ ಹಿಂದಗಡೆ ಹೋಗುತ್ತಾನೆ. ಮಂಜೂರಾತಿ ಮಾಡಿಸಿಕೊಂಡು ಬರುತ್ತಾನೆ. ಇಲ್ಲಿ ಟೆಂಡರ್ ಕರೆಯುವ ಹೊತ್ತಿಗೆ ಅಂದಾಜು ಮಂಜೂರಾತಿ ಆಗಬೇಕು. ಎಸ್ಟಿಮೇಟ್ ಬಹಳ ನಿಖರವಾಗಿ ಮಾಡಿ

ಮಂಜೂರಾತಿ ಮಾಡಿಸಿಕೊಳ್ಳಬೇಕು. ಇಲ್ಲಿ ಯಾರೂ ಗುತ್ತಿಗೆದಾರರು ಹಿಂದಗಡೆ ಹೋಗುವುದಿಲ್ಲ. ಯಾರು ಇಂಜಿನಿಯರ್‌ಗಳಿಗೆ ದುಡ್ಡು ಕೊಡುವುದಕ್ಕೆ ಹೋಗುತ್ತಾರೆ ಮಂಜೂರಾತಿ ಮಾಡಿಸಿಕೊಳ್ಳುವುದಕ್ಕೆ. ಹೀಗಾಗಿ ಯೋಜನೆ ಮಂಜೂರಾತಿಯಲ್ಲಿ ವಿಳಂಬವಾಗುತ್ತಿದೆ. ಇದರ ಬಗ್ಗೆ ನೀವು ಏನು ಗಮನಹರಿಸಿದ್ದೀರಿ. ಇಲ್ಲಾ ಯಾರು ಕಾಮಗಾರಿಯಲ್ಲಿ ಅನುಷ್ಠಾನದಲ್ಲಿ ವಿಳಂಬ ಮಾಡುತ್ತಿದ್ದಾರಲ್ಲ ಅವರು ಯಾರನ್ನಾದರೂ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಿದ್ದೀರಾ? ಅಥವಾ ಅಂತಹ ಇಂಜಿನಿಯರ್‌ಗಳ ಮೇಲೆ ಕ್ರಮ ತೆಗೆದುಕೊಂಡಿದ್ದೀರಾ ದಯಮಾಡಿ ತಿಳಿಸಬೇಕು.

ಡಾ. ಎಚ್.ಸಿ. ಮಹದೇವಪ್ಪ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೇ, 2003 ಮತ್ತು 2004ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಅನುದಾನ ನಿಗದಿಪಡಿಸಿತ್ತು. ನಿಯಮಾವಳಿಗಳ ಪ್ರಕಾರ ಎಲ್ಲಾ ಅಂದಾಜುಗಳು 360 ಕಾಮಗಾರಿಗಳ ಪ್ರಸ್ತಾವನೆಗೆ ಕೇಂದ್ರ ಸರ್ಕಾರ 118.41 ಕೋಟಿ ರೂಪಾಯಿಗಳಿಗೆ ಅನುಮೋದನೆ ನೀಡಿತ್ತು. ಕಾಮಗಾರಿ ಯೋಜನೆ ಕೈಗೊಂಡಿದ್ದು ಸುಮಾರು 2005ರ ಹೊತ್ತಿಗೆ 67 ಕಾಮಗಾರಿಗಳನ್ನು ಪೂರ್ಣ ಮಾಡಿದ್ದೇವೆ. ಮತ್ತು ಬಿಡುಗಡೆಯಾಗಿರುವ ಹಣದಲ್ಲಿ 59 ಕೋಟಿಯಲ್ಲಿ 42.5 ಕೋಟಿಯನ್ನು ವೆಚ್ಚ ಮಾಡಿದ್ದೇವೆ. ಉಳಿದಿದ್ದನ್ನು ಖರ್ಚು ಮಾಡುತ್ತೇವೆ. ಮತ್ತು ಇಲ್ಲಿ ಯಾರನ್ನು ಕಪ್ಪು ಪಟ್ಟಿಗೆ ಸೇರಿಸಿಲ್ಲ. ಟೆಂಡರ್ ಮುಖಾಂತರ ಆಗುತ್ತದೆ. ಅವರನ್ನೇ 5 ವರ್ಷಗಳ ಕಾಲ ಅವರೇ ಏನೊಂದು ಸರಿಪಡಿಸಬೇಕೋ ಅದನ್ನು ಅವರೇ ಮಾಡಬೇಕಾಗುತ್ತದೆ. ಅದರಿಂದ ಇವತ್ತು ಏನು ನಾವು ಮುಂದಿನ 2004–05ನೇ ಸಾಲಿನಲ್ಲಿ 147.47 ಕೋಟಿಗೆ ಚಾಲ್ತಿಯಲ್ಲಿರುವಂತಹ ಮಾರ್ಗಸೂಚಿಯಲ್ಲಿ 402 ಕಾಮಗಾರಿಗಳನ್ನು 1–6–2004ನೇ ಇಸವಿಯಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದೇವೆ. ಸಲ್ಲಿಸಿದ ಮೇಲೆ ಕೇಂದ್ರ ಸರ್ಕಾರ ತನ್ನ ಮಾರ್ಗಸೂಚಿಯಲ್ಲಿ ಬದಲಾವಣೆ ಮಾಡಿದರು. ಅದೇ ತಿಂಗಳಲ್ಲಿ ಮತ್ತೆ ಅದನ್ನು ವಾಪಸ್ಸು ಕಳುಹಿಸಿದರು. ಅದನ್ನು ಸರಿ ಮಾಡಿ ಪುನಃ ವಾಪಸ್ಸು ಕಳುಹಿಸುವುದಕ್ಕೆ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದೇವೆ. ಅದಕ್ಕೆ ಅವರು ಮಂಜೂರಾತಿಯನ್ನು ಕೊಡುತ್ತಾರೆ. ಅದರ ಜೊತೆಯಲ್ಲಿ ಭಾರತ ನಿರ್ಮಾಣ ರಾಜ್ಯಕ್ಕೆ 2000 ಹೆಸರಿನಲ್ಲಿ 210 ಕೋಟಿಯನ್ನು ನಿಗದಿ ಮಾಡಿದ್ದಾರೆ. ಸ್ವತಃ ನಾವು ಖುದ್ದು ಮಂತ್ರಿಗಳನ್ನು ಭೇಟಿ ಮಾಡಿದ ಮೇಲೆ ಅವರು ಇನ್ನೂ ಒಂದು 100–150 ಕೋಟಿ ರೂಪಾಯಿಗಳನ್ನು ಹೆಚ್ಚು ಕೊಡುತ್ತೇವೆ ಎನ್ನುವ ಭರವಸೆ ಕೊಟ್ಟಿದ್ದಾರೆ. ಅದ್ದರಿಂದ ಈ ಕಾಮಗಾರಿಗಳನ್ನು ಪೂರ್ಣಗೊಳಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಇದರಲ್ಲಿ ಯಾವುದೇ ಲೋಪದೋಷಗಳು ಕಂಡು ಬಂದಿಲ್ಲ. 3 ಸಮಿತಿಗಳು ಅದನ್ನು ಮಾನೀಟರ್ ಮಾಡುತ್ತವೆ. ಸೆಂಟ್ರಲ್ ಕ್ವಾಲಿಟಿ

ಮಾನೀಟರಿಂಗ್ ಟೀಮ್ ಇದೆ. ಅವರು ನೋಡಿ ಆದ ಮೇಲೆಯೇ ಸರ್ಟಿಫಿಕೇಟ್ ಕೊಡುವುದು. ಯಾವ ಯಾವ ರಸ್ತೆಗಳು ಹೇಗೆ ಹೇಗೆ ಆಗಿವೆ ಅಂತ ಹೇಳಿ ಮಾಡುತ್ತಿದ್ದಾರೆ. ಕರ್ನಾಟಕದಲ್ಲಿ ಒಟ್ಟು ಟೋಟಲ್ ನಂಬರ್ ಆಫ್ ಇನ್ಸ್‌ಪೆಕ್ಷನ್ 679 ಕ್ವಾಲಿಟಿ ಮಾನೀಟರಿಂಗ್ ಮಾಡಿರತಕ್ಕಂಥಾದ್ದು, ಅದರಲ್ಲಿ ಸ್ಯಾಟೀಸ್‌ಫ್ಯಾಕ್ಟರಿ ಅಂತ ಹೇಳಿದ್ದು 340, ಅನ್‌ಸ್ಯಾಟೀಸ್‌ಫ್ಯಾಕ್ಟರಿ ಅಂತ ಹೇಳಿದ್ದು 90 ಮತ್ತು ಇನ್ ಪ್ರೋಗ್ರೆಸ್ ಇರತಕ್ಕಂಥಾವು 180, ಪ್ರೋಗ್ರೆಸ್ 130ರಲ್ಲಿ ಸ್ಯಾಟೀಸ್‌ಫ್ಯಾಕ್ಟರಿ ಅಂತ ಹೇಳಿದ್ದು 129, ಅನ್‌ಸ್ಯಾಟೀಸ್‌ಫ್ಯಾಕ್ಟರಿ ಅಂತ ಉಳಿದವು. ಒಟ್ಟು 91.80 ಪರ್ಸೆಂಟೇಜನ್ನು ಅವರು ಕೊಟ್ಟಿದ್ದಾರೆ. ಶೇಕಡವಾರು ಅಂದರೆ ಭಾರತ ದೇಶದಲ್ಲಿ ಕರ್ನಾಟಕ ಸ್ಯಾಟೀಸ್‌ಫ್ಯಾಕ್ಟರಿ ಕಾಮಗಾರಿಗಳನ್ನು ಮಾಡಿರುವುದು 6ನೇ ರಾಜ್ಯ. ಮೊದಲನೆಯದು ಮಧ್ಯಪ್ರದೇಶ, ಉತ್ತರ ಪ್ರದೇಶ ಇಡಿ, ಮೇಘಾಲಯ, ಪಂಜಾಬ್, ಹಿಮಾಚಲ ಅದು ಬಿಟ್ಟರೆ ಕರ್ನಾಟಕ 6ನೇ ರಾಜ್ಯ ಇದೆ. 91.89 ಪರ್ಸೆಂಟನ್ನು ಸ್ಯಾಟೀಸ್‌ಫ್ಯಾಕ್ಟರಿ ಅಂತ ಹೇಳಿ ಕೇಂದ್ರ ಸರ್ಕಾರ ಕೊಟ್ಟಿರತಕ್ಕಂಥ ವರದಿ ಇದೆ. ಆದ್ದರಿಂದ ಇಲ್ಲಿ ಕಪ್ಪುಪಟ್ಟಿಗೆ ಸೇರಿಸಿಲ್ಲ. ಅದು ಸರಿ ಇಲ್ಲ ಅಂದರೆ ಅನ್‌ಸ್ಯಾಟೀಸ್‌ಫ್ಯಾಕ್ಟರಿ ಅಂದರೆ ಅವರು ನೋಡಿ ಸರಿ ಮಾಡಬೇಕು. ಯಾರು ಟೆಂಡರ್ ಕೆಲಸ ತೆಗೆದುಕೊಂಡಿರುತ್ತಾರೋ ಅವರು, ಇದರಿಂದ ಈ ಕಾಮಗಾರಿಗಳನ್ನು ಈಗ ಎಲ್ಲಾ ಸಿದ್ಧತೆ ಮಾಡಿದ್ದೇವೆ. ಮಂಜೂರಾತಿ ದೊರಕುತ್ತದೆ ಎನ್ನುವ ಮಾತನ್ನು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ತಿಳಿಸುವುದಕ್ಕೆ ಬಯಸುತ್ತೇನೆ.

ಶ್ರೀ ಎ.ಟಿ.ರಾಮಸ್ವಾಮಿ: ಮಾನ್ಯ ಅಧ್ಯಕ್ಷರೇ, ಈಗ ಯೋಜನೆಯಲ್ಲಿ ವಿಳಂಬವಾಗುತ್ತಿದೆಯೇ ಇಲ್ಲವೆ ಅಷ್ಟನ್ನು ಹೇಳಿ, ಆಮೇಲೆ 2004–05ರ ಯೋಜನೆಯನ್ನು ನೀವು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೀರಾ? ಮೊನ್ನೆ ನೀವು ಏನು ಹೇಳಿದಿರಿ ನಾವು ಕಳುಹಿಸಿಕೊಡುತ್ತೇವೆ ಎಂದು ಹೇಳಿದಿರಿ.

ಡಾ. ಎಚ್.ಸಿ. ಮಹದೇವಪ್ಪ: ದಿನಾಂಕ 1–6–2004ರಲ್ಲಿ ಕಳುಹಿಸಿದ್ದೇವೆ. ಅದೇ ಸಂದರ್ಭದಲ್ಲಿ ಮತ್ತೆ ಮಾರ್ಗಸೂಚಿಗಳು, ಎಸ್.ಆರ್.ನ್ನು ಬದಲಾವಣೆ ಮಾಡಿ ಮತ್ತೆ ವಾಪಸ್ ಕಳುಹಿಸಿದರು. ಅದಕ್ಕೆ ಪುನಃ ಇದನ್ನೆಲ್ಲಾ ಮಾಡುವುದಕ್ಕೆ ಸಮಯ ಬೇಕಾಗುತ್ತದೆ. ನಮಗೆ ಸ್ಟೇಟ್‌ಲೆವಲ್‌ನಲ್ಲಿ ಎರಡೇ ಟೆಕ್ನಿಕಲ್ ಏಜೆನ್ಸಿ ಇರುವುದು. ಸುರತ್ಕಲ್ ಮತ್ತು ವಿಶ್ವೇಶ್ವರಯ್ಯ ಯುನಿವರ್ಸಿಟಿ. ಪ್ರತಿಯೊಂದು ಕಾಮಗಾರಿಯನ್ನು ಖುದ್ದಾಗಿ ಪರಿಶೀಲನೆ ಮಾಡಬೇಕು. ಅದಕ್ಕೆ ಆದಷ್ಟು ಜಾಗ್ರತೆ ಮಾಡಿ ಕಳುಹಿಸಿ ಕೊಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ದಯಮಾಡಿ ಮಾನ್ಯ ಮಹದೇವಪ್ಪನವರ ಬಗ್ಗೆ ಮಾನ್ಯ ವಾಟಾಳ್‌ರವರು ಹೇಳುವ ಭಾಷೆಯಲ್ಲಿ

ಹೇಳುವುದಾದರೆ "ನಮಗೆ ಬಹಳ ಪ್ರೀತಿ. ನನ್ನದೇನು ಗೊತ್ತಾ, ನೀವು ಮೇಡಿಕಲ್ ಡಾಕ್ಟರ್ ಆಗಿರುವುದರಿಂದ ನಿಮಗೆ ಬೇರೆ ಒಳ್ಳೆಯ ಯಾವುದಾದರೊಂದು ಇಲಾಖೆಯನ್ನು ಕೊಡಿಸೋಣ" ಮೆಡಿಕಲ್ ಇದು ಯಾವುದಾದರೂ ನೋಡಿಕೊಳ್ಳಿ. ನೋಡಿ ಇದು ಏನಾಗಿದೆ. ಇದು ಪ್ರಿವಿಲೇಜ್ ಆಗುತ್ತದೆ. ಸಮಸ್ಯೆಯಾಗುತ್ತದೆ. ನೀವು ಇಲ್ಲಿ ಏನು ಹೇಳುತ್ತೀರಿ. ಮಾನ್ಯ ರಾಮಸ್ವಾಮಿಯವರು ಕೇಳಿದಂತಹ ಪ್ರಶ್ನೆಗೆ 2004–05ನೇ ಸಾಲಿಗೆ ಪ್ರಸ್ತಾವನೆಯನ್ನು ಕಳುಹಿಸಿದ್ದೆವು. ತಪ್ಪಾಯಿತು. ವಾಪಸ್ಸು ಬಂತು ಅಂತ. ಅಲ್ಲಾ ರೀ ಏನೋ ವ್ಯತ್ಯಾಸ ಇತ್ತು. ವಾಪಸ್ಸು ಕಳುಹಿಸಿದರು ಅಂತ. ಇಡೀ ದೇಶದ ಎಲ್ಲಾ ರಾಜ್ಯಗಳು 500 ಒಂದು ಸಾವಿರ ಕೋಟಿ ರೂಪಾಯಿಗಳನ್ನು ಉಪಯೋಗ ಮಾಡಿಕೊಂಡರು. ನೀವು ಇಲ್ಲಿ ಕೊಟ್ಟಿರುವಂತಹ ಲಿಖಿತ ಉತ್ತರದಲ್ಲಿಯೇ 2004–05ನೇ ಸಾಲಿನಲ್ಲಿ ಪ್ರಸ್ತಾಪವೇ ಮಾಡಲಿಲ್ಲ. ಅಂದರೆ ಆ ವರ್ಷದ ನಮ್ಮ ಅನುದಾನ ತಪ್ಪಿ ಹೋಯಿತು. ಎಷ್ಟು ಅವರೇ ಪತ್ರ ಬರೆದಿರುವ ಪ್ರಕಾರ 212 ಕೋಟಿ ಮುಳುಗಿ ಹೋಯಿತು. ಸ್ವಾಮಿ ಬೇಕಾದರೆ ನಿಮ್ಮ ಅಧಿಕಾರಿಗಳನ್ನು ಕರೆಯಿರಿ ನಾನು ದಾಖಲೆಗಳನ್ನು ಕೊಡುತ್ತೇನೆ. ವೆಬ್‌ಸೈಟ್‌ನಲ್ಲಿ ಎಲ್ಲಾ ಬಂದಿದೆ. ನಾನು ಡೆಲ್ಲಿಯಲ್ಲಿ ಎರಡು ದಿನ ಕುಳಿತು ಅಷ್ಟು ದಾಖಲೆಗಳನ್ನು ತೆಗೆದುಕೊಂಡು ಬಂದಿದ್ದೇನೆ. ಆಮೇಲೆ 2003–04ರ ಬಗ್ಗೆ ನೀವು ಏನು ಹೇಳುತ್ತೀರಿ. 59 ಕೋಟಿ ರೂಪಾಯಿ ಸದ್ಯದಲ್ಲಿಯೇ ಬಿಡುಗಡೆಯಾಗಲಿದೆ ಅಂತ. ಯಾರು ಕೇಂದ್ರ ಬಿಡುಗಡೆ ಮಾಡಬೇಕು. ಯಾವುದು 2003–04ರದ್ದು, ನಿಮ್ಮ ಉತ್ತರ ಏನು ಅಂತ, ಆ ಉತ್ತರದಲ್ಲಿಯೇ ಒಂದು 2003–04ಕ್ಕೆ 118.41 ಕೋಟಿ ಅಂದ್ರಿ ನಿಮ್ಮ ಕನ್‌ಫ್ಯೂಷನ್ ಏನು? ಮತ್ತೆ 2003–04ಕ್ಕೆ ನಿಮ್ಮ ಪ್ರಕಾರವೇ 80.20 ಕೋಟಿ ಖರ್ಚಾಗಲಿಲ್ಲ.

ಅಧ್ಯಕ್ಷರು: ನಿಯಮ 69ರಲ್ಲಿ ಈ ವಿಷಯ ಚರ್ಚೆಯಾಗಿದೆಯಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಅದೇ ಇಲ್ಲಿ ಮತ್ತೆ ತದ್ವಿರುದ್ಧವಾದ ಉತ್ತರ ಕೊಟ್ಟಿದ್ದಾರೆ ಸಾರ್ ಇಲ್ಲಿ. ನಾವು ಏನು ಉರುಳು ಹಾಕಿಕೊಳ್ಳಬೇಕು. ಇದು ಆಗುವುದಿಲ್ಲ ಸಾರ್, ಇಲ್ಲಿ ನಾವು ಕೆಲಸ ಮಾಡುವುದಕ್ಕೆ ಆಗುವುದಿಲ್ಲ ಸಾರ್, ಬೇಡಪ್ಪ 2003–04ನೇ ಸಾಲಿನಲ್ಲಿ ಒಟ್ಟು ಎಷ್ಟು ಅನುದಾನ ಬಂದಿದೆ? ಎಷ್ಟು ಖರ್ಚು ಮಾಡಿದ್ದೀರಿ ಹೇಳಿ. 2004–05 ಏನಾಗಿದೆ ಹೇಳಿ.

ಡಾ. ಎಚ್.ಸಿ. ಮಹದೇವಪ್ಪ: ಮಾನ್ಯ ಅಧ್ಯಕ್ಷರೆ ಹೇಳುತ್ತೇನೆ 2001–02 2002–03.....

ಶ್ರೀ ಬಿ.ಎಸ್. ಯಡಿಯೂರಪ್ಪ: ಅದು ಬೇಡವೇ ಬೇಡ. 2003–04ಕ್ಕೆ ಬಂದು ಬಿಡಿ.

ಡಾ. ಎಚ್.ಸಿ. ಮಹದೇವಪ್ಪ: 2003–04ನೇ ಸಾಲಿನಲ್ಲಿ 3ನೇ ಹಂತದ ಯೋಜನೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ 95 ಕೋಟಿ ಅನುದಾನ ನಿಗದಿಪಡಿಸಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಎಷ್ಟು ಹಣ ಬಿಡುಗಡೆಯಾಗಿದೆ?

ಡಾ. ಎಚ್.ಸಿ. ಮಹದೇವಪ್ಪ: ಹೇಳುತ್ತೇನೆ. ಯೋಜನೆಗಳ ಅಂದಾಜು ಪ್ರಕಾರ ಎಲ್ಲಾ ಸಲ್ಲಿಸಿದ 360 ಕಾಮಗಾರಿಗಳು.....

ಶ್ರೀ ಬಿ.ಎಸ್. ಯಡಿಯೂರಪ್ಪ: ಕಾಮಗಾರಿಗಳು ಬೇಡ, ದುಡ್ಡು ಎಷ್ಟು ಬಿಡುಗಡೆಯಾಗಿದೆ ಹೇಳಿ, ನೀವು ಹೇಳುವುದು ನಮಗೆ ಅರ್ಥವೇ ಆಗುವುದಿಲ್ಲ.

ಡಾ. ಎಚ್.ಸಿ. ಮಹದೇವಪ್ಪ: ಹೇಳುತ್ತೇನೆ ಸಾರ್, ನೀವು ದೊಡ್ಡವರು. ನಮ್ಮ ಮೇಲೆ ಕೋಪ ಮಾಡಿಕೊಳ್ಳುವುದು ಸರಿಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ: ಇಷ್ಟೇ ಸಾರ್, 2003–04ನೇ ಸಾಲಿನಲ್ಲಿ ದಯಮಾಡಿ ತಪ್ಪು ತಿಳಿದುಕೊಳ್ಳಬೇಡಿ. 2003–04ನೇ ಸಾಲಿಗೆ ಕೇಂದ್ರ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿದೆ. ಎಷ್ಟು ಖರ್ಚು ಮಾಡಿದ್ದೀರಿ? ನೀವು ಕಾಮಗಾರಿ ನಂಬರ್ ಹೇಳಬೇಡಿ, ಅದು ಹಾಳಾಗಿ ಹೋಗಲಿ, ಹಣ ಹೇಳಿ ನಮಗೆ, ಅರ್ಥವಾಗುವ ಭಾಷೆಯಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ ಎಷ್ಟು ಹಣ ಖರ್ಚು ಮಾಡಿದ್ದೀರಿ? 2004–2005 ಮುಳುಗಿ ಹೋಗಿದೆ. ಹೌದೋ ಇಲ್ಲವೋ ಅಷ್ಟು ಹೇಳಿ.

ಡಾ. ಎಚ್.ಸಿ.ಮಹದೇವಪ್ಪ: ಇಲ್ಲ ಮುಳುಗಿ ಹೋಗಿಲ್ಲ. ನೋಡಿ 2003–04 59 ಕೋಟಿ, ವೆಚ್ಚವಾಗಿರುವುದು 38.19 ಕೋಟಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ನೀವು ಇಲ್ಲಿ ಎನೋ ಒಂದು ಕಾಲಂನಲ್ಲಿ ಕೊಟ್ಟಿದ್ದೀರಲ್ಲ 118.41 ಲಕ್ಷ.

ಡಾ. ಎಚ್.ಸಿ.ಮಹದೇವಪ್ಪ: ಅಂದರೆ ಒಟ್ಟಾರೆ ನಾವು ಇದಕ್ಕೆ ಮಾಡಿಕೊಂಡಿರುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ: ರೈತನ ಮಗನಿಗೆ ಅರ್ಥವಾಗುವ ಭಾಷೆಯಲ್ಲಿ ಹೇಳಿ 118.41 ಕೋಟಿ ಅಂತ ಬರೆದಿದ್ದೀರಿ. 2003–04 ಅದರಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ ಹೇಳಿ.

ಡಾ. ಎಚ್.ಸಿ. ಮಹದೇವಪ್ಪ: 59 ಕೋಟಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಅದನ್ನೇ ನಾನು ಹೇಳುತ್ತಿರುವುದು. ಸಾರ್ ಈಗ ಉಳಿದ ದುಡ್ಡು ಬಿಡುಗಡೆಯೇ ಆಗಿಲ್ಲ ಸಾರ್.

ಡಾ. ಎಚ್.ಸಿ.ಮಹದೇವಪ್ಪ: 59 ಕೋಟಿ ರಿಲೀಜ್ ಆಗಿದೆ...

ಶ್ರೀ ಬಿ.ಎಸ್. ಯಡಿಯೂರಪ್ಪ: ಕಥೆ ಹೇಳ್ಬೇಡ್ರಿ. ಮಾನ್ಯ ಅಧ್ಯಕ್ಷರೆ ತಾವು ದಯಮಾಡಿ ತಾವು ನಮ್ಮ ರಕ್ಷಣೆಗೆ ಬರಬೇಕು ಸಾರ್, ಸಾರ್ ನಿಮಗೆ ಅರ್ಥವಾಯಿತೆ ನನ್ನ ಪ್ರಶ್ನೆ.

ಡಾ. ಎಚ್.ಸಿ. ಮಹದೇವಪ್ಪ: ಕನ್‌ಫ್ಯೂಷನ್ ಏಕೆ ಮಾಡಿಕೊಳ್ಳುತ್ತೀರಿ.

ಶ್ರೀ ಬಿ.ಎಸ್.ಯಡಿಯೂರಪ್ಪ: 2003–04ಕ್ಕೆ ಅವರು ಹೇಳುವ ಪ್ರಕಾರ 118.41 ಕೋಟಿ ಬಿಡುಗಡೆಯಾಗಿರುವುದು ದೇವರ ಮೇಲೆ ಪ್ರಮಾಣ ಮಾಡಿ ಅವರಿಗೆ ಹೇಳುತ್ತಿದ್ದೇನೆ. ಅವರಿಗೆ ಗೊತ್ತಿಲ್ಲದಿದ್ದರೆ ತಿಳಿದುಕೊಳ್ಳಲಿ, ಬಿಡುಗಡೆಯಾಗಿರುವುದು 59 ಕೋಟಿ ಮಾತ್ರ. ಅದರಲ್ಲೂ ಪೂರ್ತಿ ಖರ್ಚು ಮಾಡಿಲ್ಲ. ಉಳಿದ ದುಡ್ಡು ತರಿಸಬೇಕು. ಯಾವ ಕಾಲದ್ದು 2003–04ರದ್ದು, 2004–05 ಏನು? 2005–06ಕ್ಕೆ ಈಗಾಗಲೇ ಪ್ರಸ್ತಾವನೆಯನ್ನು ಕಳುಹಿಸಿ ದುಡ್ಡು ತೆಗೆದುಕೊಂಡಿದ್ದಾರೆ ಬೇರೆ ರಾಜ್ಯದವರು. ನಾನು ಹೇಳುವುದು ನಿಮ್ಮ ಜಾಗದಲ್ಲಿ ಬೇರೆ ಯಾರೇ ಇದ್ದರೂ ನಿಮ್ಮ ಅಧಿಕಾರಿಗಳು ಕೆಲಸ ಮಾಡದಿದ್ದರೆ, ಮಂತ್ರಿಗಳು ಈ ಕೆಲಸ ಮಾಡುವುದಕ್ಕೆ ಆಗುತ್ತದೆಯೇ? ನಿಮ್ಮ ಬಗ್ಗೆ ನಾವು ಆರೋಪ ಮಾಡುತ್ತಿಲ್ಲ. ಆದರೆ ನಾನು ನಿಮ್ಮನ್ನು ಕೇಳುವುದು 2003–04ಕ್ಕೆ 118 ಕೋಟಿಯಲ್ಲಿ ಬರೀ ನೀವು 95 ಕೋಟಿ ಬಂದಿದೆ. ಉಳಿದ ದುಡ್ಡು ಏನು? 118 ಕೋಟಿಯಲ್ಲಿ ಕೇವಲ 59.41 ಕೋಟಿ ಬಂದಿದೆ ಉಳಿದಿದ್ದು, 2003–04ಕ್ಕೆ ಬಾಕಿ ಇದೆ. 2004–05, 2005–06ರಲ್ಲಿ ನಾವಿದ್ದೇವೆ. ಅದಕ್ಕೆ ನನಗೆ ಉತ್ತರ ಕೊಡಿ.

ಅಧ್ಯಕ್ಷರು: ಈಗ ಮಾನ್ಯ ಸಚಿವರೆ ಅವರು ಸ್ಪಷ್ಟವಾಗಿ ಹೇಳುತ್ತಿದ್ದಾರೆ. ನಿಮ್ಮ ಆರ್.ಡಿ.ಪಿಆರ್ ಇದೆಯಲ್ಲ ಅಲ್ಲಿ ಏನಾದರೂ ಹೆಚ್ಚು ಕಡಿಮೆ ಆಗಿದೆಯೇ ಅಂತ ಹೇಳುತ್ತಿದ್ದಾರೆ. ಏನು ಮಾಡುತ್ತಿದ್ದಾರೆ ನಿಮ್ಮ ಸೆಕ್ರೆಟರಿಗಳು ಅವರು, ಇವರು,

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ ನಾನು ಮಹದೇವಪ್ಪನವರ ಜೊತೆ ಇದ್ದೇನೆ, ಮಾಧುಸ್ವಾಮಿಯವರೇ ನೀವೂ ಇದ್ದೀರಿ. ಅಧಿಕಾರಿಗಳು ಅವರ ಜೊತೆ ಇಲ್ಲ. ಇಲಾಖೆಯವರು ಅವರ ಜೊತೆ ಇಲ್ಲ. ಅದಕ್ಕೆ ನಾನು ಹೇಳಿದ್ದು, ಹೆಲ್ತ್ ಅಂಡ್ ಫ್ಯಾಮಿಲಿ ವೆಲ್‌ಫೇರ್ ಇಲಾಖೆ ಚೆನ್ನಾಗಿ ಮಾಡುತ್ತಿದ್ದೀರಿ. ಚೇಂಜ್ ಮಾಡಿಸಿಕೊಳ್ಳಿ.

ಡಾ. ಎಚ್.ಸಿ. ಮಹದೇವಪ್ಪ: ಮಾನ್ಯ ಅಧ್ಯಕ್ಷರೇ, ನಮಗೆ 2003–04ರಲ್ಲಿ ಮಂಜೂರಾತಿ ಆಗಿರುವುದು 118 ಕೋಟಿ. ರಿಲೀಜ್ ಆಗಿರುವುದು 59 ಕೋಟಿ. ಖರ್ಚಾಗಿರುವುದು 38 ಕೋಟಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಏಕೆಂದರೆ ನೀವು ಯುಟಿಲೈಜೇಶನ್ ಸರ್ಟಿಫಿಕೇಟ್ ಕಳುಹಿಸಲಿಲ್ಲ.

ಶ್ರೀ ಎಚ್.ಸಿ. ಮಹಾದೇವಪ್ಪ: ಸ್ಯಾಂಕ್ಷನ್ ಆಗಿರುವ ದುಡ್ಡು ಅವರು ಕೊಟ್ಟೇ ಕೊಡುತ್ತಾರೆ, ಲ್ಯಾಪ್ಸ್ ಆಗುವುದಿಲ್ಲ. ಹಿರಿಯ ನಾಯಕರು ಎಮೋಶನ್ ಆಗಬೇಕಾಗಿಲ್ಲ.

ಅಧ್ಯಕ್ಷರು: ಮುಂದಿನ ಪ್ರಶ್ನೆಗೆ ... ಎಲ್ಲ ಇಂಪಾರ್ಟೆಂಟ್

ಶ್ರೀ ಬಿ.ಎಸ್.ಯಡಿಯೂರಪ್ಪ: ಸಾರ್ ಪ್ರಶ್ನೋತ್ತರ ಇದೆಯಲ್ಲ ಅವರು ಅರ್ಥ ಸ್ಪಷ್ಟವಾಗಿ ಉತ್ತರ ಕೊಟ್ಟು ಬಿಟ್ಟರೆ ನಾವ್ಯಾರೂ ಏನು ಮಾಡುವುದಕ್ಕೆ ಆಗುತ್ತದೆ ಸಾರ್? ಸ್ಪಷ್ಟವಾಗಿ ಉತ್ತರ ಕೊಡದಲ್ಲಿ ಇಡೀ ರಾಜ್ಯದಲ್ಲಿ ಗ್ರಾಮೀಣಾಭಿವೃದ್ಧಿಯಲ್ಲಿ ಪ್ರಧಾನಮಂತ್ರಿ ಯೋಜನೆ ಇಲ್ಲದಿದ್ದರೆ ನಾನು ಹೇಳುತ್ತೇನೆ ಕೇಳಿ ಪ್ರಿವಿಲೇಜಾಗುತ್ತದೆ. ಅವರು ಹಾಗೆ ಮಾಹಿತಿ ಕೊಡಲು ಬರುವುದಿಲ್ಲ.

ಅಧ್ಯಕ್ಷರು: ಆಯಿತು, ಏನಾದರೂ ವಿಚಾರಣೆಗೆ ಯೋಚನೆ ಮಾಡೋಣ ಬಿಡಿ. ದೇ ಆರ್ ಅಕೌಂಟಬಲ್, ಈಗ ಪ್ರಶ್ನೋತ್ತರದಲ್ಲಿ ಬೇರೆ ರೀತಿ ಯೋಚನೆ ಮಾಡಲು ಬರುವುದಿಲ್ಲ. ಮುಂದಿನ ಪ್ರಶ್ನೆಗೆ ಹೋಗೋಣ.

ಶ್ರೀ ಗೋವಿಂದ ಎಂ. ಕಾರ್ಜೋಳ: ಕಾಮಗಾರಿ ವಿಳಂಬವಾಗಲು ಮೂಲ ಕಾರಣ ಯಾರೂ ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ. ನಾನು ಹೇಳುತ್ತೇನೆ. ಇವರು ಪ್ಯಾಕೇಜ್ ಸಿಸ್ಟಂನಲ್ಲಿ ಟೆಂಡರ್ ಕರೆದುಕೊಡುತ್ತಾರೆ. ಡಾಂಬರನ್ನೂ ಕಂಟ್ರಾಕ್ಟರೇ ತರಬೇಕಾಗುತ್ತದೆ. ಡಾಂಬರು ಪರ್ಚೇಸ್ ಮಾಡಬೇಕಾದರೆ ಕೇಂದ್ರ ಸರ್ಕಾರ ಐಒಸಿ, ಬಿಪಿಸಿ, ಎಲ್‌ಪಿಸಿ ಕಂಪೆನಿಗಳಲ್ಲಿ ಮುಂಗಡ ಹಣ ಕೊಟ್ಟು ಪರ್ಚೇಸ್ ಮಾಡಬೇಕಾಗುತ್ತದೆ. ಕಂಟ್ರಾಕ್ಟರ್ ಹತ್ತಿರ ಒಂದೇ ಸಲ ಅಷ್ಟೊಂದು ಮೊತ್ತ ಇರಲಾರದ್ದಕ್ಕಾಗಿ ಅವರು ಪೀಸ್‌ಮಿಲಾಗಿ ಪರ್ಚೇಸ್ ಮಾಡುತ್ತಾರೆ.

ಅಧ್ಯಕ್ಷರು: ನೋಡಿ ಪ್ರಶ್ನೋತ್ತರದಲ್ಲಿ ಇದೆಲ್ಲಾ ಆಗುವುದಿಲ್ಲ. ಮುಂದಿನ ಪ್ರಶ್ನೆ: ಬಿ.ಆರ್. ಪಾಟೀಲ್, ಕಾರ್ಜೋಳ ನೀವೇನು ಹೇಳುತ್ತಿದ್ದೀರಿ ನನಗೆ ಅರ್ಥವಾಯಿತು. ಕತೆ ಹೇಳಿದಂತೆ ಹೇಳುತ್ತಿದ್ದೀರಿ. ಅದಕ್ಕೆ ಉತ್ತರ ಕೊಡಲು ಸಾಧ್ಯವೇ? ತೃಪ್ತಿಪಡಿಸಲು ಸಾಧ್ಯವೇ?

ಶ್ರೀ ಗೋವಿಂದ ಎಂ. ಕಾರ್ಜೋಳ: ಟೆಂಡರ್ ಕೊಡುವಾಗ ಡಾಂಬರನ್ನು ಇಲಾಖೆಯಿಂದ ಖರೀದಿ ಮಾಡಿಕೊಟ್ಟರೆ ಕೆಲಸಗಳು ಬೇಗ ಆಗುತ್ತವೆ. ಅದಕ್ಕಾಗಿ ಅಸ್ಫಾಲ್ಟನ್ನು ಖರೀದಿ ಮಾಡಿಕೊಡುವ ವ್ಯವಸ್ಥೆ ಮಾಡಿ.

ಅಧ್ಯಕ್ಷರು: ಈಗ ಬಿ.ಆರ್.ಪಾಟೀಲರ ಪ್ರಶ್ನೆ – ಆಬ್ಸೆಂಟ್